ತ್ತದೆ ನಾನು ಸರ್ಕಾರವನ್ನು ಬೆದರಿಸುತ್ತಿದ್ದೇನೆ, ಟೀಕೆ ಮಾಡುತ್ತಿದ್ದೇನೆ ಎನ್ನುವ ಪ್ರಶ್ನೆಯಲ್ಲ, ಈ ಪ್ರಶ್ನೆ ಜಲಂತ ಪ್ರಶ್ನೆಯಾಗಿ ಉಳಿದುಕೊಂಡು ಬಂದಿದೆ. ಇವೊತ್ತು ಉಪವಾಸ ಕುಳಿತಿದ್ದಾರೆ. ಪರಿಸ್ಥಿತಿ ಕೈಮೀರಿ ಹೋಗದ ರೀತಿಯಲ್ಲಿ ಸರ್ಕಾರದವರು ಆದಷ್ಟು ಬೇಗನೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ನಮ್ಮ ಒತ್ತಾಯ. ಯಾವುದೇ ಒಂದು ವಿಷಯವಾದರೂ ಸರ್ಕಾರದವರ ತೀರ್ಮಾನ ಏನು ಎಂಬುದನ್ನು ಹೇಳಬೇಕು. ಕೇವಲ ಆಶ್ವಾಸನೆ ಕೊಡುವುದು ಬೇಡ. ಇದರ ಬಗ್ಗೆ ಒಂದು ಅಂತಿಮ ತೀರ್ಮಾನವನ್ನು ಘೋಷಣೆ ಮಾಡುವುದು ಬಹಳ ಒಳ್ಳೆಯದು. ಇಲ್ಲದೇ ಹೋದರೆ ಪರಿಸ್ಥಿತಿ ಬಹಳ ಕಠಿಣವಾಗಿ ಆದಕ್ಕೆ ನಾವೂ ನೀವೂ ಹೊಣೆಗಾರರಾಗಬೇಕಾಗುತ್ತದೆ ಎಂಬುದನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸಚಿವರು ಬಹುಶಃ ಆ ಮನೆಯಲ್ಲಿ ಇರಬಹುದೆಂದು ಕಾಣುತ್ತದೆ. ಏಕೆಂದರೆ ಈಗ ಎರಡೂ ಸದನಗಳು ನಡೆಯುತ್ತಿವೆ. ಆ ಮನೆಯಲ್ಲಿ ಪ್ರಶ್ನೋತ್ತರದ ವೇಳೆ ಇರುವುದರಿಂದ ಅವರು ಅಲ್ಲಿಗೆ ಹೋಗಿರಬಹುದು.

ಶ್ರೀ ಜೆ.ಎಚ್. ಪಟೀಲ್.—ಅವರು ಈ ಮನೆಯಲ್ಲಿದ್ದರೂ ಒಳ್ಳೆಯದು, ಅಥವಾ ಆ ಮನೆಯಲ್ಲಿದ್ದರೂ ಒಳ್ಳೆಯದು. ಆದರೆ ಈ ಎರಡು ಮನೆಯನ್ನೂ ಬಿಟ್ಟು ಅವರ ಮನೆಯಲ್ಲೇ ಇದ್ದು ಬಿಟ್ಟರೆ ಬಹಳ ಕಷ್ಟವಾಗುತ್ತದೆ.

(ನಗು)

ಶ್ರೀ ಭಾವೂರಾವ್ ದೇಶಪಾಂಡೆ.—ಈ ವಿಚಾರದಲ್ಲಿ ಅಂದರೆ ಸ್ಟೈಪೆಂಡರಿ ಪದವೀಧರರ ವಿಚಾರದಲ್ಲಿ ಸರ್ಕಾರದ ನೀತಿ ಏನು ? ಎನ್ನುವ ಬಗ್ಗೆ ಸ್ಪಷ್ಟವಾದ ನಿರ್ಣಯ ನಮಗೆ ಬೇಕಾಗಿದೆ.

ಅಧ್ಯಕ್ಷರು.—ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲ. ಇವತ್ತು ತಾವು ನೋಟೀಸ್ ಕಳುಹಿಸಿ ಕೊಟ್ಟರೆ ಅದನ್ನು ನಾನು ಸರ್ಕಾರಕ್ಕೆ ಕಳುಹಿಸಿ ತಮಗೆ ಉತ್ತರವನ್ನು ತರಿಸಿಕೊಡುತ್ತೇನೆ.

LEGISLATIVE BUSINESS
THE KARNATAKA MUNICIPALITIES (AMENDMENT) BILL, 1982.

Leave to Introduce

SRI Y. RAMAKRISHNA (Minister for Law & Parliamentary Affairs) On behalf of Sri Dharam Singh Narayan Singh, (Minister for Housing and Urban Development).—I move:

"That leave be granted to introduce the Karnataka Municipalities (Amendment) Bill, 1982."

MR. SPEAKER.—The question is :

"That leave be granted to introduce the Karnataka Municipalities (Amendment) Bill, 1982."

The motion was adopted and leave was granted.

SRI Y. RAMAKRISHNA.—I introduce the Karnataka Municipalities (Amendment) Bill, 1982.

MR. SPEAKER.—The Bill is introduced* Now discussion contd.